# ಆಹಾ ಸುದ್ದಿ!

★ ಸಸಿತೋಟ



ಆಸ್ಟ್ರೇಲಿಯಾದ ಈ ಕುರಿ ಬರೋಬ್ಬರಿ 40 ಕೆ.ಜಿ. ಉಣ್ಣೆಯನ್ನು ಮೈಮೇಲೆ ಬೆಳೆಸಿಕೊಂಡಿತ್ತಂತೆ. ಮೈಮೇಲಿನ ಭಾರವಾದ ಕೋಟ್‌ನಿಂದಾಗಿ ನಡೆಯಲೇ ಕಷ್ಟಪಡುತ್ತಿದ್ದ ಈ ಕುರಿಯನ್ನು ಯಾರೋ ನೋಡಿ ಶೇವ್ ಮಾಡಿ ಕಳುಹಿಸಿದ್ದಾರಂತೆ. ವಿಶ್ವದಲ್ಲೇ ಅತ್ಯಂತ ಹೆಚ್ಚು ಪ್ರಮಾಣದ ಉಣ್ಣೆ ಉತ್ಪಾದಕ ಈ ಕುರಿಗೆ 'ಬಾ ಬಾ ಬ್ಲ್ಯಾಕ್‌ಶೀಪ್.. ಹ್ಯಾವ್ ಯೂ ಎನಿ ವ್ಹೂಲ್?' ಎಂದು ಕೇಳುವ ಅಗತ್ಯವೇ ಇಲ್ಲ.



ಇಂಗ್ಲೆಂಡ್‌ನ ಸಸೆಕ್ಸ್‌ನ ಬ್ರ್ಯೂಡಾಗ್ ಬಾರ್‌ನಲ್ಲಿ ಮದ್ಯಪಾನ ಮಾಡಿದ ನಂತರ ಅಪರೂಪದ ಸವಾರಿ ಭಾಗ್ಯವಿದೆಯಂತೆ. ಟ್ಯಾಕ್ಸಿಡರ್ಮಿ (ಸತ್ತ ಪ್ರಾಣಿಯ ತೊಗಲಿನೊಳಗೆ ಮೆತ್ತೆ ತುಂಬಿಸುವ ಕಲೆ) ಮಾಡಿದ ಕತ್ತೆಯ ಮೇಲೆ ಕೂಡ್ರಿಸಿ ಎಳೆಯುತ್ತಾರಂತೆ. ಕುಡಿದ ಅಪರಾಧಕ್ಕೆ ಕತ್ತೆಯ ಮೆರವಣಿಗೆ.. ಸರಿಯಾಗೇ ಇದೆ.

ಪುರುಷರ ಸೌಂದರ್ಯವರ್ಧಕಗಳ ಮಾರಾಟ ಕುಸಿದಿದೆಯಂತೆ. ಹಾಗಂತ ಸಮೀಕ್ಷೆ ಮಾಡಿದ ಇಂಗ್ಲೆಂಡ್‌ನ ಸಂಸ್ಥೆಯೊಂದು ಇದಕ್ಕೆ ಕಾರಣ ಪುರುಷರಲ್ಲಿ ಹೆಚ್ಚಾಗಿರುವ ಗಡ್ಡ ಬೆಳೆಸುವ ಕ್ರೇಜ್ ಎಂದು ಕಂಡು ಹಿಡಿದಿದೆ. ಹೆಚ್ಚು ನೈಸರ್ಗಿಕ ಎಂದು ಯುವಕರು ಮುಖದ ಮೇಲಿನ ಕಳೆಯತ್ತ ಗಮನ ಕೊಡುತ್ತಿದ್ದು, ಹೆಚ್ಚಿನವರು ಫೇಸ್‌ಕ್ರೀಮ್ ಕೈಬಿಟ್ಟು ತಲೆ ಮತ್ತು ಮುಖದ ಮೇಲಿನ ಕೇಶಕ್ಕೆ ಟೂ-ಇನ್- ಒನ್ ಎಂದು ಶಾಂಪೂ ಖರೀದಿಸುತ್ತಿದ್ದಾರಂತೆ. ಕಂಪೆನಿಗಳು ಫೇಶಿಯಲ್ ಶಾಂಪೂ ಉತ್ಪಾದನೆಯತ್ತ ಮುಖ ಮಾಡಬಹುದು.



ಇಂಗ್ಲೆಂಡ್‌ನ ಸೋಲೆಂಟ್ ಸಮುದ್ರ ತೀರದಲ್ಲಿ ಪ್ರತಿ ವರ್ಷ ಕ್ಲಬ್ ತಂಡಗಳ ನಡುವೆ ಕ್ರಿಕೆಟ್ ಪಂದ್ಯ ನಡೆಯುತ್ತದೆ. ಬ್ರ್ಯಾಂಬಲ್ ಬ್ಯಾಂಕ್ ಕ್ರಿಕೆಟ್ ಎಂದೇ ಹೆಸರಾದ ಅಲೆಗಳ ಮಧ್ಯೆ ನಡೆಯುವ ಈ ಚೆಂಡು-ದಾಂಡಿನ ಆಟಕ್ಕೆ ಇಡೀ ವರ್ಷ ತಯಾರಿ ನಡೆಯುತ್ತದೆ. ಫೋರ್, ಸಿಕ್ಸರ್‌ಗೆಲ್ಲ ಒಂದೊಂದು ಹೊಸ ಚೆಂಡು ಬೌಲರ್‌ನ ಕೈ ಸೇರುತ್ತದೆ.

ಸೆಲ್ಫಿ ಕ್ರೇಜ್ ಎಲ್ಲಿಯವರೆಗೆ ಹೋಗಿದೆಯೆಂದರೆ ಸಾವು ಮತ್ತು ಬದುಕಿನ ನಡುವಿನ ವ್ಯತ್ಯಾಸವನ್ನೇ ಅಳಿಸಿ ಹಾಕುವಷ್ಟು. ರಷ್ಯಾದಲ್ಲೀಗ ಹೆಣದ ಜೊತೆ ಸೆಲ್ಫಿ ತೆಗೆಸಿಕೊಂಡು ಸಾಮಾಜಿಕ ಜಾಲತಾಣದಲ್ಲಿ ಅಂಟಿಸಿಕೊಳ್ಳುತ್ತಾರಂತೆ. ಇದಕ್ಕಾಗಿ ಜಾಲತಾಣವೊಂದು ಸ್ಪರ್ಧೆ ಏರ್ಪಡಿಸಿದ್ದು ಅಪಘಾತದಲ್ಲಿ ಮೃತಪಟ್ಟ ಬಾಲಕನ ಶವದ ಜೊತೆ ನಗುತ್ತ ಸೆಲ್ಫಿ ತೆಗೆಸಿಕೊಂಡವನಿಗೆ ಬಹುಮಾನ ನೀಡಿದೆಯಂತೆ. ಎಷ್ಟೆಂದರೂ ಸತ್ತ ಮೇಲೆ ಸ್ವರ್ಗಕ್ಕೆ ಹೋಗುತ್ತಾರೆ ಎಂದು ಸಂತಸಪಡಬೇಕು ತಾನೆ!



ಬೀಜಿಂಗ್‌ನಲ್ಲಿ ನಡೆದ ಐಎಎಎಫ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಎತ್ತರ ಜಿಗಿತದಲ್ಲಿ ಭಾಗವಹಿಸಿದ ಇಟಲಿಯ ತಾಂಬೆರಿ. ಆಟಕ್ಕೆ ಮುಂಚೆಯೇ ಅರ್ಧ ಶೇವ್ ಮಾಡಿಕೊಂಡಿದ್ದ ಈತ ಪಂದ್ಯಾವಳಿ ಮುಗಿದ ನಂತರ ಕ್ಲೀನ್ ಶೇವನ್ ಎಂಬುದನ್ನು ಸಾಂಕೇತಿಕವಾಗಿ ಹೀಗೆ ತೋರಿಸಬಾರದಿತ್ತು.